# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 30(79) |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಿ ಆಯುಷ್ ಇಲಾಖೆ ವಾಸ್ತವವಾಗಿ ಸಾರ್ವಜನಿಕರಿಗೆ ಉಪಯೋಗವಾಗುತ್ತಿರುವ ವಿಭಾಗಗಳು ಯಾವುವು; (ತಜ್ಞ ವೈದ್ಯರ ಸಂಪೂರ್ಣ ಮಾಹಿತಿ ನೀಡುವುದು)</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಆಯುರ್ವೇದ ಆಸ್ಪತ್ರೆ, ದೊಡ್ಡಬಳ್ಳಾಪುರ ಇದನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ (CSS) ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸಿ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ಈ ಕೆಳಕಂಡ ವೈದ್ಯಾಧಿಕಾರಿಗಳನ್ನು ಅವರ ಎದುರಿಗೆ ನಮೂದಿಸಿರುವ ವಿಭಾಗಗಳಲ್ಲಿ ನೇಮಿಸಿಕೊಂಡು ಸಾರ್ವಜನಿಕರಿಗೆ ಆಯುರ್ವೇದ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ:-
<table>
<tr><th>ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಹೆಸರು</th><th>ಸ್ನಾತಕೋತ್ತರ ತಜ್ಞತೆ ಇರುವ ವೈದ್ಯಕೀಯ ವಿಭಾಗಗಳು</th></tr>
<tr><td>ಡಾ|| ಅನಿಲ್ ಕುಮಾರ್ ಸಜ್ಜನ್ (ಗುತ್ತಿಗೆ ಆಧಾರದಲ್ಲಿ)</td><td>ಶಲ್ಯತಂತ್ರ</td></tr>
<tr><td>ಡಾ|| ಸರಿತಾರಾಣಿ (ಗುತ್ತಿಗೆ ಆಧಾರದಲ್ಲಿ)</td><td>ರಸಶಾಸ್ತ್ರ</td></tr>
</table>
</td></tr>
<tr><td>(ಆ)</td><td>ಆಯುಷ್ ಇಲಾಖೆಯ ಸೇವೆಗಳನ್ನು ಸಾರ್ವಜನಿಕರು ಸದುಪಯೋಗ ಮಾಡಿಕೊಳ್ಳಲು ಇಲಾಖೆ ಕೈಗೊಂಡಿರುವ ಕ್ರಮಗಳೇನು ಮತ್ತು ಯಾವ ಯಾವ ವಿಭಾಗಗಳು ಚಿಕಿತ್ಸೆ ಲಭ್ಯವಿದೆ; (ಸಂಪೂರ್ಣ ವಿವರ ನೀಡುವುದು)</td><td>ಆಯುಷ್ ಇಲಾಖೆಯ ಸೇವೆಗಳನ್ನು ಸಾರ್ವಜನಿಕರು ಸದುಪಯೋಗ ಮಾಡಿಕೊಳ್ಳಲು ಆಯುಷ್ ಅರಿವು ಕಾರ್ಯಕ್ರಮ, ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸುವುದು, ಸ್ವಚ್ಛತೆ, ಜೀವನಶೈಲಿ, ದಿನಚರ್ಯೆ, ಋತುಚರ್ಯೆ, ಆಹಾರ, ವಿಹಾರ ಮತ್ತು ಯೋಗ ಇವುಗಳ ಬಗ್ಗೆ ಅರಿವು ಮೂಡಿಸುವುದು ಸಂಬಂಧಪಟ್ಟ ಕರಪತ್ರಗಳನ್ನು ವಿತರಿಸುವುದು, ರೇಡಿಯೋ ಕಾರ್ಯಕ್ರಮಗಳು, ಆಯುಷ್ ವೆಬ್ ಸೈಟ್ ಮೂಲಕ ಪ್ರಚಾರ, SCSP/TSP ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರು ಆಯುಷ್ ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ರಾಜ್ಯದಲ್ಲಿ ನ್ಯಾಮ್ ಯೋಜನೆಯಡಿ 376 ಆಯುಷ್ಮಾನ್ ಆರೋಗ್ಯ ಮಂದಿರ (ಆಯುಷ್) ಗಳನ್ನು ಅಭಿವೃದ್ಧಿಪಡಿಸಿ ಪ್ರತಿನಿತ್ಯ ಸಾರ್ವಜನಿಕರಿಗೆ ಯೋಗ ತರಬೇತಿಯನ್ನು ನೀಡಲಾಗುತ್ತಿದೆ.</td></tr>
</table>

| | | |
|---|---|---|
| | | ಈ ಕೆಳಕಂಡ ವಿಭಾಗಗಳಲ್ಲಿ ಸಾರ್ವಜನಿಕರಿಗೆ ಚಿಕಿತ್ಸೆ ನೀಡಲಾಗುತ್ತಿದೆ.<br><br>1. ಶಾಲಾಕ್ಯತಂತ್ರ (ಇ.ಎನ್.ಟಿ)<br>1. ಕಾಯಚಿಕಿತ್ಸಾ<br>2. ಶಲ್ಯತಂತ್ರ<br>3. ರಸಶಾಸ್ತ್ರ<br>4. ಪಂಚಕರ್ಮ<br>5. ರೆಪರ್ಟರಿ<br>6. ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ<br>7. ಮೆಟೀರಿಯಾ ಮೆಡಿಕಾ |
| (ಇ) | ಆಯುಷ್ ಇಲಾಖೆಯಲ್ಲಿ ಕ್ರಿಮಿನಲ್ ಮತ್ತು ಭ್ರಷ್ಟಾಚಾರದ ಗುರುತರ ಆರೋಪ ಹೊಂದಿರುವ ಹಿರಿಯ ವೈದ್ಯಾಧಿಕಾರಿಗಳನ್ನು ಉನ್ನತ ಮಟ್ಟದ (doo, dd) ಸ್ಥಾನಕ್ಕೆ ನೇಮಿಸಲಾಗಿದೆಯೇ; ಹಾಗಿದ್ದಲ್ಲಿ, ಈಗಾಗಲೇ ಆರೋಪ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಯಾರು? (ಮಾಹಿತಿ ನೀಡುವುದು) | ಆಯುಷ್ ಇಲಾಖೆಯಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |

**ಸಂಖ್ಯೆ: ಆಕುಕ 173 ಪಿಟಿಡಿ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು